ಇಂದು ದಿನಾಂಕಃ 01.08.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ಮಾಡಿಸಲಾಯಿತು.

**ಪಾಟೀ ಸವಾಲುಃ** ವಾದಿಯ ಪರ ಶ್ರೀ ಹೆಚ್ ಎಸ್ ಕೆ ವಕೀಲರಿಂದಃ

ನಾನು ಮತ್ತು ಪ್ರತಿವಾದಿ 4 ರಿಂದ 8 ರವರು ಬೇರೆ ಬೇರೆಯಾಗಿ ವಾಸ ಮಾಡುತ್ತಿದ್ದೇವೆ ಎಂದರೆ ಸರಿ. ಆ ರೀತಿ ನಾವು ಪ್ರತ್ಯೇಕಗೊಂಡು 35 ರಿಂದ 40 ವರ್ಷ ಆಗಿರುತ್ತದೆ. ಆವತ್ತಿನಿಂದಲೂ ನಮ್ಮ ಮನೆತನದ ವ್ಯವಹಾರಗಳನ್ನು ನಾವೇ ಮಾಡುತ್ತೇವೆ ಅವರ ಮನೆತನದ ವ್ಯವಹಾರಗಳನ್ನು ಅವರೇ ಮಾಡುತ್ತಾರೆ ಎಂದರೆ ಸರಿ. ಸದರಿ ಪ್ರತಿವಾದಿಯರು ಈ ದಾವೆಯಲ್ಲಿ ಸಾಕ್ಷ್ಯ ನುಡಿಯಲು ನನಗೆ ಅಧಿಕಾರ ಪತ್ರವನ್ನು ನೀಡಿರುವುದಿಲ್ಲ ಆದರೆ ಅನುಮತಿಯನ್ನು ನೀಡಿರುತ್ತಾರೆ. ಉಳಿದ ಪ್ರತಿವಾದಿಯರ ಪರವಾಗಿ ಸಾಕ್ಷ್ಯವನ್ನು ನುಡಿಯಲು ನನಗೆ ಹಕ್ಕು ಇಲ್ಲ ಎಂದರೆ ಸರಿಯಲ್ಲ.

2. ಪ್ರತಿವಾದಿಯರಾದ ನಾವು ಮಾಡಿಸಿದ ಸರ್ವೆಯನ್ನು ಪ್ರಶ್ನಿಸಿ 3 ನೇ ವಾದಿ ಡಿ. ಡಿ. ಎಲ್. ಆರ್. ರವರ ಮುಂದೆ ಮೇಲ್ಮನವಿಯನ್ನು ಸಲ್ಲಿಸಿದ್ದರು ಎಂದರೆ ಸರಿ. ಸದರಿ ಮೇಲ್ಮನವಿಯಲ್ಲಿ ನಾನು ವಕೀಲರ ಮೂಲಕ ಹಾಜರಾಗಿರುತ್ತೇನೆ. ಸದರಿ ಅಪೀಲಿನ ಆದೇಶವನ್ನು ಸಾಕ್ಷಿಗೆ ತೋರಿಸಿದ್ದು ಅದನ್ನು ಸಾಕ್ಷಿ ಗುರುತಿಸಿದ ಮೇರೆಗೆ ಅದನ್ನು ನಿಪಿ-15 ಎಂದು ಗುರುತಿಸಲಾಯಿತು. ಸದರಿ ಆದೇಶದ ಪ್ರಕಾರ ನಾವು ಸರ್ವೇ ಮಾಡಿಸಿದ್ದು ರದ್ದಾಗಿರುತ್ತದೆ ಎಂದರೆ ಸರಿ. ನಂತರ ಹೊಸದಾಗಿ ಸರ್ವೆ ಮಾಡಿಸಿ ಎಂದು ನಿರ್ದೇಶನವನ್ನು ನೀಡಿರುತ್ತಾರೆ ಎಂದರೆ ಸರಿ.

3. ಮಹಾದೇವಪ್ಪ ನವರಿಗೆ ನಾವು 8 ಮಂದಿ ಮಕ್ಕಳು. ಬಸವರಾಜಪ್ಪ, ಭೀಮಪ್ಪ ಚಂದ್ರಪ್ಪ ರವರೂ ಕೂಡ ಮಹಾವದೇವಪ್ಪ ಮಕ್ಕಳು ಎಂದರ ಸರಿ. ಅವರು ಈಗಾಗಲೇ ಪೋತಿಯಾಗಿರುತ್ತಾರೆ. ಬಸವರಾಜಪ್ಪ ರವರಿಗೆ ಚೆನ್ನವ್ವ ಎಂಬ ಹೆಂಡತಿ ಹಾಗೂ ಇಬ್ಬರು ಮಕ್ಕಳು ಇರುತ್ತಾರೆ. ಅವರಲ್ಲಿ ಒಬ್ಬರು ತೀರಿಕೊಂಡಿದ್ದು ಇನ್ನೊಬ್ಬರು ಕುಮಾರ ರವರಾಗಿರುತ್ತಾರೆ ಅವರು ನಮ್ಮ ಊನರಿಲ್ಲಿಯೇ ವಾಸವಾಗಿರುತ್ತಾರೆ. ಬೀಮಪ್ಪ ರವರಿಗೆ ರುದ್ರವ್ವ ಎಂಬ ಹೆಂಡತಿ, ಒಬ್ಬ ಮಗ ಮತ್ತು ಒಬ್ಬ ಮಗಳು ಇರುತ್ತಾರೆ. ಮಗ ಸತ್ಯೇಶ ಮತ್ತು ಮಗಳ ಹೆಸರು ನೆನಪಿರುವುದಿಲ್ಲ. ಆಕೆಯನ್ನು ಚಿಕ್ಕಾಪುರ ಗ್ರಾಮಕ್ಕೆ ಮದುವೆ ಮಾಡಿಕೊಟ್ಟಿರುತ್ತಾರೆ. ಚಂದ್ರಪ್ಪನ ಹೆಂಡತಿಯ ಹೆಸರು ಸುದಾ, ಆಕೆ ಶಿಕ್ಷಕಿಯಾಗಿ ಕೆಲಸ ಮಾಡುತ್ತಿದ್ದಾರೆ. ಆಕೆಗೆ ಮಕ್ಕಳು ಇರುವುದಿಲ್ಲ.

4. ಹೊಲಬಿಕೊಂಡ ಗ್ರಾಮದ ಸರ್ವೆನಂ. 179 ಒಟ್ಟು 29 ಎಕರೆ 23 ಗುಂಟೆ ಆಗಿರುತ್ತದೆ.

ವಾದಿ ಹಾಜರಪಡಿಸಿರುವಂತಹ ಹಸ್ತ ನಕ್ಷೆ ಸುಳ್ಳು ಇದೆ ಎಂದು ಸುಳ್ಳು ಸಾಕ್ಷ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ವಾದಿಯರು ಹಾಜರಪಡಿಸಿರುವಂತಹ ಹಸ್ತ ನಕ್ಷೆ ತಾಲೂಕು ಭೂಮಾಪಕರು



ಮಾಡಿರುವಂತಹ ನಕ್ಷೆ ಯಾಗಿರುತ್ತದೆ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ಸದರಿ ನಕ್ಷೆ ಸುಳ್ಳು ಇರುತ್ತದೆ ಹಾಗೂ ಅದು ಸ್ಥಿತಿಗತಿಗೆ ಅನುಗುಣವಾಗಿ ಮಾಡಿಲ್ಲ ಎಂದು ನಡಿದಿರುತ್ತಾರೆ. ಸದರಿ ನಕಾಶೆಯಂತೆ ಉತ್ತರದಿಂದ ದಕ್ಷಿಣಕ್ಕೆ ಬಂದು ನಂತರ ಪಶ್ಚಿಮದ ಕಡೆಗೆ ಹೋಗಲು ಚಕ್ಕಡಿ ದಾರಿ ಇರುತ್ತದೆ ಎಂದರೆ ಸರಿಯಲ್ಲ.

(ಈ ಹಂತದಲ್ಲಿ ಮುಂದುವರೆದ ಪಾಟೀ ಸವಾಲಿಗೆ ವಾದಿ ಪರ ವಕೀಲರು ಸಮಯಾವಕಾಶ ಕೋರಿದ್ದು, ಮುಂದೂಡಲಾಯಿತು)

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು)

ನನ್ನ ಸಮಕ್ಷಮ

ಓ ಹೇ ಕೇ ಸರಿ ಇದೆ.

ಸಿ.ಜೆ. ಮತ್ತು ಜೆ.ಎಮ್.ಎಫ್.ಸಿ.,
ಹಿರೇಕೆರೂರು.